ಹನಿ

# ಕೊನೆಗೂ ಗೆದ್ದ ಗ್ರ್ಯಾನ್‌ಸ್ಲಾಮ್

ಕ್ಯಾರೊಲಿನ್ ವೊಜ್ನಿಯಾಖಿ. ಈ ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತೆ. ಆಸ್ಟ್ರೇಲಿಯಾ ಓಪನ್‌ನ ಫೈನಲ್‌ನಲ್ಲಿ ವಿಶ್ವದ 'ನಂಬರ್ ಒನ್ ಸೀಡ್' ಆಟಗಾರ್ತಿ ಸಿಮೊನಾ ಹ್ಯಾಲೆಪ್‌ಗಳನ್ನು ಮೂರು ಸೆಟ್‌ಗಳಲ್ಲಿ ಮಣಿಸಿ ಈ ಸಲದ ಆಸ್ಟ್ರೇಲಿಯನ್ ಓಪನ್ ಗ್ರ್ಯಾನ್‌ಸ್ಲಾಮ್ ಗೆದ್ದಾಗ ವೊಜ್ನಿಯಾಖಿ ಖುಷಿಯಿಂದ ಕಣ್ಣೀರು ತಡೆಯಲಾಗದೆ ಅತ್ತೇ ಬಿಟ್ಟಳು. ಈ ಪ್ರಶಸ್ತಿಯೊಂದಿಗೆ ಕ್ಯಾರೊಲಿನ್ ವಿಶ್ವ ಟೆನಿಸ್‌ನಲ್ಲಿ 'ನಂಬರ್ ಒನ್' ಸ್ಥಾನವನ್ನೂ ಆಕ್ರಮಿಸಿಕೊಂಡಳು. ಒಂದೇ ದಿನ ಡಬಲ್ ಖುಷಿ! 27ರ ಹರೆಯದ ವೊಜ್ನಿಯಾಕಿ (ಬರ್ತ್‌ಡೇ 11.7.1990) ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಸ್ಕ್ಯಾಂಡಿನೇವಿಯನ್ ದೇಶಗಳ ಮೊದಲ ಆಟಗಾರ್ತಿಯೂ ಹೌದು. ಸ್ವೀಡನ್, ನಾರ್ವೆ ಮತ್ತು ಡೆನ್ಮಾರ್ಕ್ ದೇಶಗಳನ್ನು ಸ್ಕ್ಯಾಂಡಿನೇವಿಯನ್ ದೇಶಗಳು ಎನ್ನುತ್ತಾರೆ. (ಕೆಲವರು ಇದಕ್ಕೆ ಐಸ್‌ಲ್ಯಾಂಡ್ ಅನ್ನೂ ಸೇರಿಸುತ್ತಾರೆ.) ಜಗತ್ತಿನ ಅತ್ಯಂತ ಶ್ರೀಮಂತ ದೇಶಗಳಿವು. ಆದರೆ ಶ್ರೀಮಂತ ಕ್ರೀಡೆಯಾದ ಟೆನಿಸ್‌ನಲ್ಲಿ ಅಮೆರಿಕ, ಫ್ರಾನ್ಸ್‌ಗಳ ಪಾರಮ್ಯವನ್ನು ಎದುರಿಸಲಾಗದ ಈ ದೇಶಗಳು ಈಗ ವೊಜ್ನಿಯಾಖಿಯ ಸಾಧನೆಯಿಂದಾಗಿ ಕುಣಿದು ಕುಪ್ಪಳಿಸುತ್ತಿವೆ.

ವೊಜ್ನಿಯಾಖಿಗೆ ವೈಯಕ್ತಿಕವಾಗಿಯೂ ಇದು ಖುಷಿಯಿಂದ ಕುಪ್ಪಳಿಸುವ ಸಾಧನೆಯೇ. ಯಾವುದಾದರೂ ಒಂದು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಗೆಲ್ಲಲೇಬೇಕೆಂದು ಕಳೆದ ಎಂಟು ವರ್ಷಗಳಿಂದ ಅವಿರತ ಪ್ರಯತ್ನ ನಡೆಸುತ್ತಿದ್ದ ಆಕೆ, ಇದೀಗ ತನ್ನ 43ನೇ ಪ್ರಯತ್ನದಲ್ಲಿ ಯಶ ಸಾಧಿಸಿದ್ದಾಳೆ. 2009ರಲ್ಲೊಮ್ಮೆ ಮತ್ತು 2014ರಲ್ಲಿ ಇನ್ನೊಮ್ಮೆ ಯುಎಸ್ ಓಪನ್ ಗ್ರ್ಯಾನ್‌ಸ್ಲಾಮ್ ಫೈನಲ್ ತಲುಪಿದ್ದರೂ ಸೋತು ಹೊರಬಿದ್ದಿದ್ದಳು. ಈ ಅವಧಿಯಲ್ಲಿ ಒಟ್ಟು 28 ವಿವಿಧ ಟೆನಿಸ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿದ್ದರೂ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಕನಸಾಗಿಯೇ ಉಳಿದಿತ್ತು. ಈಗ ಅದು ಕೈಗೂಡಿದೆ.

ಆಸ್ಟ್ರೇಲಿಯಾ ಓಪನ್‌ನಲ್ಲಿ ಈ ಸಲ ಸೆರೆನಾ ವಿಲಿಯಮ್ಸ್ ಭಾಗವಹಿಸದೇ ಇದ್ದುದು ವೊಜ್ನಿಯಾಖಿಗೆ ಅದೃಷ್ಟ ತಂದಿರೂ ಬಹುದು. ಸಿಸೇರಿಯನ್ ಹೆರಿಗೆ ಆಗಿ ಆಸ್ಪತ್ರೆಯಲ್ಲಿ ಕಡ್ಡಾಯ 6 ವಾರಗಳ ಬೆಡ್‌ರೆಸ್ಟ್‌ನಲ್ಲಿರುವ ಸೆರೆನಾ, ಈ ಸಲ ಆಸ್ಟ್ರೇಲಿಯನ್ ಓಪನ್‌ನಲ್ಲಿ ಭಾಗವಹಿಸುವುದು ಖಂಡಿತಾ ಎಂದೇ ಸಂಘಟಕರು ಪ್ರಚಾರ ಮಾಡಿದ್ದರಿಂದ ಭರ್ಜರಿ ಟಿಕೆಟ್ ಸೇಲ್ ಆಗಿತ್ತು. ಆದರೆ ನೆರೆದ ಪ್ರೇಕ್ಷಕರಿಗೆ ನಿರಾಶೆಯಾಗದಂತೆ ಫೈನಲ್‌ನಲ್ಲಿ ವೊಜ್ನಿಯಾಕ್ ಮತ್ತು ಸಿಮೋನಾ ನಡುವಣ ಪಂದ್ಯ ಖಡಾಖಡಿ ಹೋರಾಟವಾಗಿತ್ತು. ಮೊದಲ ಸೆಟ್ ಗೆದ್ದು ಎರಡನೇ ಸೆಟ್‌ನಲ್ಲಿ ಸೋತು ಮೂರನೇ ಸೆಟ್‌ನಲ್ಲಿ ಗೆದ್ದ ವೊಜ್ನಿಯಾಕಿ, ರಕ್ಷಣಾತ್ಮಕ ತಂತ್ರಗಳಿಂದಲೇ ಗೆಲುವು ದಕ್ಕಿಸಿಕೊಂಡಳು. ಮೆಲ್ಬರ್ನ್‌ಬಲ್ಲಿ 30 ಡಿಗ್ರಿ ಇದ್ದ ತಾಪಮಾನದಿಂದಾಗಿ ಸೆಟ್‌ಗಳ ಮಧ್ಯೆ ಹತ್ತು ನಿಮಿಷಗಳ ವಿಶ್ರಾಂತಿಯನ್ನೂ ನೀಡಲಾಯಿತು. ಅಷ್ಟಾಗಿಯೂ ಫೈನಲ್ ಸೋತ ಸಿಮೋನಾ 'ಡಿಹೈಡ್ರೇಷನ್'ನಿಂದಾಗಿ ಇಡೀ ರಾತ್ರಿ ಆಸ್ಪತ್ರೆಯಲ್ಲಿ ಕಳೆಯಬೇಕಾಯಿತು.



ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಯೊಂದಿಗೆ ವೊಜ್ನಿಯಾಖಿ ವಿಶ್ವದ 'ನಂಬರ್ ಒನ್' ಸೀಡ್‌ಅನ್ನೂ ಮರಳಿ ಗೆದ್ದುಕೊಂಡಳು. ಹಿಂದೆ 2010—11ರಲ್ಲಿ 6–7 ವಾರಗಳ ಕಾಲ ಈಕೆ 'ನಂಬರ್ ಒನ್' ಆಗಿದ್ದಳು. ಆಗ 'ನಂಬರ್ ಒನ್' ಪಟ್ಟದಲ್ಲಿದ್ದ ಸೆರೀನಾಳನ್ನೇ ಪಕ್ಕಕ್ಕೆ ಸರಿಸಿದ್ದಳು. ಆದರೆ ಈ ಸಲ 'ನಂಬರ್ ಒನ್' ಸ್ಥಾನಕ್ಕೆ ಒಟ್ಟು ಆರು ಜನ ಪ್ರತಿಸ್ಪರ್ಧಿಗಳಿದ್ದರು. ಒಟ್ಟು ಅಂಕ ಗಳಿಕೆಯ ಹಿನ್ನೆಲೆಯಲ್ಲಿ ಗ್ಯಾಬ್ರಿನ್ ಮುಗುರುಜಾ, ಎಲಿನಾ ಸ್ವಿಟ್ಲೊನಾ, ಕ್ಯಾರೊಲಿನಾ ಪ್ಲಿಸ್ಕೊವಾ ಪ್ರಬಲ ಪ್ರತಿಸ್ಪರ್ಧಿಗಳು. ಆದರೆ ವೊಜ್ನಿಯಾಖಿ ಫೈನಲ್‌ವರೆಗೂ ತಲುಪಿ ಪ್ರಶಸ್ತಿಯನ್ನೂ ಗೆದ್ದದ್ದರಿಂದ 'ನಂಬರ್ ಒನ್' ಪಟ್ಟ ಕೂಡಾ ತಾನಾಗಿ ಒಲಿಯಿತು.

ಡ್ಯಾನಿಶ್ ಭಾಷೆಯಲ್ಲಿ ಈಕೆಯ ಹೆಸರನ್ನು ಉಚ್ಚರಿಸುವುದು (ಕಒಲಿನ್ ವಾಸ್ನಿಅಗಿ) ಸುಲಭ. ಆದರೆ ಈಕೆ ಸಾಗಿ ಬಂದ ಟೆನಿಸ್ ಹಾದಿ ಅಷ್ಟು ಸುಲಭದ್ದಲ್ಲ. ತಾಯಿ ಪೋಲೆಂಡ್‌ನ ರಾಷ್ಟ್ರೀಯ ವಾಲಿಬಾಲ್ ತಂಡದ ಆಟಗಾರ್ತಿ. ತಂದೆ ಫುಟ್‌ಬಾಲ್ ಆಟಗಾರ. ತಂದೆಗೆ ಡೆನ್ಮಾರ್ಕ್‌ನಲ್ಲಿ ಕ್ಲಬ್ ತಂಡವೊಂದರಲ್ಲಿ ಸ್ಥಾನ ಸಿಕ್ಕಿದ್ದರಿಂದ ಇಬ್ಬರೂ ಡೆನ್ಮಾರ್ಕ್‌ಗೆ ವಲಸೆ ಬಂದರು. ಅಲ್ಲೇ ಹುಟ್ಟಿದ ಮಗಳಿಗೆ 14 ವರ್ಷದವರೆಗೆ ಅಪ್ಪನೇ ಟೆನಿಸ್ ಕೋಚ್. ಆ ಬಳಿಕ ಕೋಚ್‌ಗಳು ಬದಲಾಗುತ್ತಲೇ ಹೋದರು. 2013––14ರಲ್ಲೇ ಒಟ್ಟು ನಾಲ್ಕು ಕೋಚ್‌ಗಳು ಬಂದು ಹೋದರು. ಕೊನೆಗೆ ತಂದೆಯೇ ಮತ್ತೆ ಕೋಚಿಂಗ್ ಶುರು ಮಾಡಿದ. ಈಗ ತಂದೆ ಕೋಚ್ ಆಗಿರುವಾಗಲೇ ಜೀವನದ ಮೊತ್ತ ಮೊದಲ ಗ್ರ್ಯಾನ್‌ಸ್ಲಾಮ್ ಗೆದ್ದಿದ್ದಾಳೆ.

ತಾಳ್ಮೆಯ ರಕ್ಷಣಾತ್ಮಕ ಆಟ ವೊಜ್ನಿಯಾಖಿಯ ಕೈಹಿಡಿದಿದೆ. ಎರಡೂ ಕೈಗಳನ್ನು ಬಳಸಿ ಹೊಡೆಯುವ ಬ್ಯಾಕ್‌ಹ್ಯಾಂಡ್ ಶಾಟ್ ಈಕೆಯ ಟ್ರಂಪ್‌ಕಾರ್ಡ್. ರಕ್ಷಣಾತ್ಮಕ ಆಟವಾಡುತ್ತಲೇ ಒಮ್ಮೆಲೆ ಆಕ್ರಮಣಕಾರಿ ಆಗುವುದು ವಿಶಿಷ್ಟ ಶೈಲಿ. ಆಸ್ಟ್ರೇಲಿಯನ್ ಓಪನ್ ಗ್ರ್ಯಾನ್‌ಪ್ರಿ ಗೆದ್ದಾಗ ಈಕೆಯನ್ನು ಅಭಿನಂದಿಸಲು, ಈ ಹಿಂದೆ 12 ಸಲ ಆಸ್ಟ್ರೇಲಿಯನ್ ಗ್ರ್ಯಾನ್‌ಪ್ರಿ ಪ್ರಶಸ್ತಿ ಗೆದ್ದಿರುವ ಹಿರಿಯ ಆಟಗಾರ್ತಿ ಬಿಲ್ಲಿಜೀನ್ ಕಿಂಗ್ ಖುದ್ದಾಗಿ ಹಾಜರಿದ್ದುದು ವಿಶೇಷ.

2011ರಲ್ಲೇ ವೊಜ್ನಿಯಾಖಿ ವಿಶ್ವದಲ್ಲೇ 2ನೇ ಅತ್ಯಧಿಕ ಆದಾಯ ಗಳಿಕೆಯ ಅಥ್ಲೀಟ್ ಆಗಿದ್ದಾಕೆ. ಅಲ್ಲಿಂದೀಚೆಗೆ ಹತ್ತಿಪ್ಪತ್ತು ಜಾಹೀರಾತುಗಳಲ್ಲಿ ಮಿಂಚುತ್ತಿದ್ದಾಳೆ. ಬ್ಯಾಬೊಲಟ್, ರೋಲೆಕ್ಸ್, ಅಡಿಡಾಸ್, ಉಸಾನಾ, ದಿ ಪ್ಲೇಯರ್ಸ್ ಟ್ರಿಬ್ಯೂನ್, ಮುಂಡಿಫಾರ್ಮಾ, ಟರ್ಕಿಶ್ ಏರ್‌ಲೈನ್ಸ್– – ಹೀಗೆ ಹಲವು ಕಂಪೆನಿಗಳಿಗೆ ರಾಯಭಾರಿ. ಈಗ ಗ್ರ್ಯಾನ್‌ಸ್ಲಾಮ್ ವಿಜಯದೊಂದಿಗೆ ಜಾಹೀರಾತು ಲೋಕದಲ್ಲಿ ಈಕೆಯ ದರ ದುಪ್ಪಟ್ಟಾಗಿದೆ. 2017ರಲ್ಲಿ ಒಟ್ಟು 71 ಪಂದ್ಯಗಳನ್ನು ಗೆದ್ದು ದಾಖಲೆ ನಿರ್ಮಿಸಿರುವ, ವೊಜ್ನಿಯಾಖಿ ಇನ್ನೀಗ 'ನಂಬರ್ ಒನ್' ಪಟ್ಟವನ್ನು ಎಷ್ಟು ಅವಧಿಗೆ ಉಳಿಸಿಕೊಳ್ಳುತ್ತಾಳೆ ಎನ್ನುವುದು ಕುತೂಹಲದ ಸಂಗತಿ.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65